**ಮೊದಲ ಭಾರತ-ಮಲೇಷ್ಯಾ ಭದ್ರತಾ ಸಂವಾದ**

ಜನವರಿ 07, 2025

ಭಾರತದ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಭದ್ರತಾ ಸಲಹೆಗಾರ ಶ್ರೀ ಅಜಿತ್ ಧೋವಲ್ ಮತ್ತು ಮಲೇಷ್ಯಾದ ರಾಷ್ಟ್ರೀಯ ಭದ್ರತಾ ಮಂಡಳಿಯ ಮಹಾನಿರ್ದೇಶಕ ರಾಜಾ ದಾತೋ ನುಶಿರ್ವಾನ್ ಬಿನ್ ಜೈನಲ್ ಅಬಿದಿನ್ ಅವರು ಜನವರಿ 07, 2025 ರಂದು ಭಾರತದ ನವದೆಹಲಿಯಲ್ಲಿ ನಡೆದ ಮೊದಲ ಭಾರತ-ಮಲೇಷ್ಯಾ ಭದ್ರತಾ ಸಂವಾದದ ಜಂಟಿ ಅಧ್ಯಕ್ಷತೆ ವಹಿಸಿದ್ದರು.

2. ಭದ್ರತಾ ಸಂವಾದದ ಸಮಯದಲ್ಲಿ ಎರಡೂ ಕಡೆಯವರು ಜಾಗತಿಕ ಮತ್ತು ಪ್ರಾದೇಶಿಕ ಭದ್ರತಾ ವಾತಾವರಣದ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಭದ್ರತೆ, ರಕ್ಷಣೆ ಮತ್ತು ಕಡಲ ಕ್ಷೇತ್ರಗಳಲ್ಲಿ ನಡೆಯುತ್ತಿರುವ ದ್ವಿಪಕ್ಷೀಯ ಸಹಕಾರವನ್ನು ಪರಿಶೀಲಿಸಿದರು. ಭಯೋತ್ಪಾದನೆ ನಿಗ್ರಹ ಮತ್ತು ಮೂಲಭೂತವಾದ ನಿರ್ಮೂಲನೆ; ಸೈಬರ್ ಭದ್ರತೆ; ರಕ್ಷಣಾ ಉದ್ಯಮ; ಮತ್ತು ಕಡಲ ಭದ್ರತೆಯಲ್ಲಿ ಸಹಕಾರವನ್ನು ಹೆಚ್ಚಿಸಲು ಇಬ್ಬದಿಯಿಂದಲೂ ಒಪ್ಪಿಕೊಳ್ಳಲಾಯಿತು. ನಿರ್ಣಾಯಕ ಖನಿಜಗಳು ಮತ್ತು ಅಪರೂಪದ ಭೂ ನಿಕ್ಷೇಪಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಮಾರ್ಗಗಳ ಕುರಿತಾಗಿ ಪರಿಶೋಧನೆ ಮಾತುಕತೆ ನಡೆಸಿದರು. ವಾರ್ಷಿಕ ಸಭೆಗಳನ್ನು ನಡೆಸುವ ಮೂಲಕ ಸಂವಾದವನ್ನು ಸಾಂಸ್ಥಿಕಗೊಳಿಸಲು ಒಪ್ಪಿಕೊಳ್ಳಲಾಯಿತು.

3. ಈ ಸಂವಾದವು ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ ಆಗಸ್ಟ 2024 ರಲ್ಲಿ ಮಲೇಷ್ಯಾದ ಪ್ರಧಾನ ಮಂತ್ರಿ ಡಾಟೊ ಸೆರಿ ಅನ್ವರ್ ಇಬ್ರಾಹಿಂ ಅವರು ಭಾರತಕ್ಕೆ ನೀಡಿದ ಭೇಟಿಯ ಫಲಿತಾಂಶವಾಗಿದೆ. ಈ ಭೇಟಿಯ ಸಮಯದಲ್ಲಿ ಭಾರತ- ಮಲೇಷ್ಯಾ ದ್ವಿಪಕ್ಷೀಯ ಸಂಬಂಧಗಳನ್ನು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೆ ಹೆಚ್ಚಿಸಲಾಯಿತು ಮತ್ತು ಇಬ್ಬರೂ ನಾಯಕರು ದ್ವಿಪಕ್ಷೀಯ ಭದ್ರತಾ ಸಹಕಾರವನ್ನು ಬಲಪಡಿಸಲು ಸಹಮತ ವ್ಯಕ್ತಪಡಿಸಿದ್ದರು.

ನವದೆಹಲಿ

ಜನವರಿ 07, 2025